## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಬೆಲೆ ಆಯೋಗ ರಚನೆ ಕುರಿತು

ಓದಲಾಗಿದೆ: (1) ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ ದಿನಾಂಕ:12-07-2013

(2) ಕೃಷಿ ನಿರ್ದೇಶನಾಲಯದ ಏಕ ಕಡತ ಸಂಖ್ಯೆ: ಉಕೃನಿ/ಕೃನಿ/ಕೃಬೆಆ/2013-14, ದಿನಾಂಕ: 02-07-2013.

****

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಭಾಷಣ ದಿನಾಂಕ: 12-07-2013ರ ಕಂಡಿಕೆ -50 ರಲ್ಲಿ " ರೈತರು ತಮ್ಮ ಉತ್ಪನ್ನಗಳಿಗೆ ಸಿಗುವ ಅನಿಶ್ಚಿತ ಬೆಳೆಗಳಿಂದಾಗಿ ಯಾವಾಗಲೂ ಸಂಕಷ್ಟಕಕ್ಕೆ ಈಡಾಗುತ್ತಾರೆ. ಇದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಕೃಷಿಗೆ ತೊಡಗಿಸಿದ ಉತ್ಪಾದನಾ ವೆಚ್ಚರು ಅವರಿಗೆ ದಕ್ಕುವುದಿಲ್ಲ. ಆದ್ದರಿಂದ, ಸೂಕ್ತ ಬೆಲೆ ನಿಗಧಿಗೊಳಿಸಲು ಕೃಷಿ ಬೆಲೆ ಆಯೋಗವನ್ನು ರಚಿಸಲಾಗುವುದು. ಈ ಆಯೋಗವು ರೈತರು, ಕೃಷಿ ತಜ್ಞರು ಮತ್ತು ಕೃಷಿ ಹಾಗೂ ಆರ್ಥಿಕ ತಜ್ಞರನ್ನು ಒಳಗೊಂಡಿರುತ್ತದೆ. ಆಯೋಗವು ವೈಜ್ಞಾನಿಕವಾಗಿ ಮಾಡುವ ಶಿಫಾರಸ್ಸುಗಳನ್ನು ಆಧರಿಸಿ ಸರ್ಕಾರವು ಸೂಕ್ತ ಬೆಲೆಯನ್ನು ನಿಗಧಿಪಡಿಸಲಿದೆ" ಎಂದು ಪ್ರಸ್ತಾಪಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಏಕ ಕಡತದಲ್ಲಿ ಕೃಷಿ ಆಯುಕ್ತರು ಕೃಷಿ ಉತ್ಪನ್ನ ಬೆಲೆ ಆಯೋಗ ರಚಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಬಗ್ಗೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಕೃಷಿ ವಿಷಯದಲ್ಲಿ ಪರಿಣಿತರಾದ ಕೃಷಿ ವಿಶ್ವವಿದ್ಯಾಲಯದ ತಜ್ಞರು, ಕೃಷಿ ಮಾರುಕಟ್ಟೆ ತಜ್ಞರು, ಕೃಷಿ ಆರ್ಥಿಕ ತಜ್ಞರು, ಪ್ರಗತಿಪರ ರೈತರು, ಎ ಪಿ ಎಂ ಸಿ ಅಧ್ಯಕ್ಷರು ಹಾಗೂ ಹಿರಿಯ ಅಧಿಕಾರಿಗಳನ್ನೊಳಗೊಂಡ ವಿಶೇಷ ಕಾರ್ಯಗಾರವನ್ನು ನಡೆಸಿ ಹಿಂದಿನ ವರ್ಷಗಳಲ್ಲಿ (2001-2007) ಇದ್ದಂತಹ ಆಯೋಗದ ರೂಪುರೇಷೆ, ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಕರ್ತವ್ಯ ಮತ್ತು ಕಾರ್ಯವ್ಯಾಪ್ತಿ, ಈಗಿರುವ ಕೃಷಿ ಮಾರುಕಟ್ಟೆ ವಸ್ತುಸ್ಥಿತಿ ಹಾಗೂ ಇತರೆ ವಿಷಯಗಳನ್ನಾಧರಿಸಿ ಚರ್ಚಿಸಿ ವಿವಿಧ ತಜ್ಞರು ನೀಡಿದ ಸಲಹೆಗಳನ್ನು ಪರಿಗಣಿಸಿ ಹಲವು ಸಭೆಗಳನ್ನು ನಡೆಸಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲೂ ಸಹ ವಿಶೇಷ ಸಭೆ ನಡೆಸಿ ಅಭಿಪ್ರಾಯಗಳನ್ನು ಪರಿಗಣಿಸಿ ಸಚಿವ ಸಂಪುಟದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸಚಿವ ಸಂಪುಟವು, ಕೃಷಿ ಬೆಲೆ ಆಯೋಗ ರಚನೆಗೆ ಸಂಬಂಧಿಸಿದಂತೆ ಪರಿಶೀಲಿಸಿ ಸೂಕ್ತ ಶಿಫಾರಸ್ಸು ಮಾಡಲು ದಿನಾಂಕ: 16-11-2013 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿರುತ್ತದೆ.

ಅದರಂತೆ ಸಚಿವ ಸಂಪುಟದ ಉಪ ಸಮಿತಿ ಅಧ್ಯಕ್ಷರಾದ ಸನ್ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ,ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರ ಅಧ್ಯಕ್ಷತೆಯಲ್ಲಿ ಒಂದೆರಡು ಸಭೆಗಳನ್ನು ನಡೆಸಿ ಅಂತಿಮವಾಗಿ ದಿನಾಂಕ: 07-01-2014ರಂದು ನಡೆದ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.

**ಕೃಷಿ ಬೆಲೆ ಆಯೋಗದ ದೃಷ್ಟಿಕೋನ:**

ರೈತರಿಗೆ ಗ್ರಾಹಕರ ಬೆಲೆಯಲ್ಲಿ ಗರಿಷ್ಟ ಪಾಲು ಖಚಿತ ಪಡಿಸುವುದು, ರಾಜ್ಯದ ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸಲು, ಆಹಾರ ಭದ್ರತಾ ಅಗತ್ಯಗಳನ್ನು ಪೂರೈಸುವ ಉದ್ದೇಶ, ಕೃಷಿ ಉತ್ಪನ್ನಗಳಿಗೆ

ಪ್ರತಿಫಲ ಬೆಲೆ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸುವುದು ಇತ್ಯಾದಿ ರಾಜ್ಯದ ಕೃಷಿ ಬೆಲೆ ಆಯೋಗದ ಮುಖ್ಯ ದೃಷ್ಟಿಕೋನವಾಗಿರುತ್ತದೆ.

ಧ್ಯೇಯ:

ಕೃಷಿ ಉತ್ಪನ್ನಗಳಿಗೆ ಪ್ರತಿಫಲ ಬೆಲೆ ಒದಗಿಸುವುದು, ಮಾರುಕಟ್ಟೆಯ ಮೂಲ ಸೌಕರ್ಯವನ್ನು ಉತ್ತಮಗೊಳಿಸುವುದು, ಬೆಲೆ ಮತ್ತು ಬೆಲೆಯೇತರ ಕ್ರಮಗಳಿಂದ ಮಾರುಕಟ್ಟೆ ಸ್ಥಿರೀಕರಿಸುವುದು, ಹೆಚ್ಚಿನ ಉತ್ಪಾದನೆ ಸಮಯದಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶ, ರೈತರಿಗೆ ಲಾಭದಾಯಕ ಬೆಲೆ ಪಡೆಯುವುದಕ್ಕಾಗಿ (collective bargaining power ) ಮತ್ತು ಮಾರುಕಟ್ಟೆ ಸುಧಾರಣೆ, ಬೆಳೆ ವಿಮೆ, ಇ-ವ್ಯಾಪಾರ ICT ಮೂಲಕ ಕೃಷಿ ಸಮುದಾಯದ ಎಲ್ಲಾ ವರ್ಗ/ ಪ್ರದೇಶಗಳಿಗೆ ಲಾಭ ತಲುಪುವುದು ಮುಖ್ಯ ಉದ್ದೇಶವಾಗಿರುತ್ತದೆ.

ಈ ಆಯೋಗಕ್ಕೆ ಸಂಬಂಧಪಟ್ಟ ನಿಬಂಧನೆಗಳು, ಕರ್ತವ್ಯಗಳು ಮತ್ತು ರಚನೆ ಅನುಬಂಧ-1,2 ಮತ್ತು 3 ರಂತಿದೆ. ಸರ್ಕಾರವು ಶಿಫಾರಸ್ಸುಗಳನ್ನು ಪರಿಗಣಿಸಿದೆ. ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2013, ಬೆಂಗಳೂರು, ದಿನಾಂಕ: 31-01-2014.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಅಧ್ಯಕ್ಷರು ಹಾಗೂ ಐದು ಸದಸ್ಯರನ್ನೊಳಗೊಂಡ ಕೃಷಿ ಬೆಲೆ ಆಯೋಗವನ್ನು ಅನುಬಂಧ-1, 2 ಮತ್ತು 3 ರಲ್ಲಿನ ನಿಬಂಧನೆ, ಕರ್ತವ್ಯ ಮತ್ತು ರಚನೆಯಂತೆ ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

31.1.14
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಹಾಗೂ ನಿರ್ದೇಶಕರು ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಕಳುಹಿಸ್ಕುತ್ತಾ, ಮೇಲ್ಕಂಡ ಆದೇಶವನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಸಚಿವಾಲಯದ ಈ ಇಲಾಖೆಗೆ ಒದಗಿಸುವಂತೆ ಕೋರಲಾಗಿದೆ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) /(ಇ & ಆರ್ ಎಸ್ ಎ) ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-01.
3. ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು,
4. ಎಲ್ಲಾ ಸಚಿವರು /ಎಲ್ಲಾ ರಾಜ್ಯ ಸಚಿವರುಗಳ ಆಪ್ತಕಾರ್ಯದರ್ಶಿಗಳು, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.